PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 6, MAY-JUNE 2021, 155-162
©*IIMRD*, Mysuru

www.iimrd.com

# ಸಾವಯವ ಕೃಷಿ ಪದ್ಧತಿಯಲ್ಲಿ ಗೋವುಗಳ ಪಾತ್ರ

**ಶಿವರಾಜು.ಎ**[1]

**ಪೀಠಿಕೆ**

ಭಾರತ ಕೃಷಿ ಪ್ರಧಾನವಾದ ದೇಶ. ಕೃಷಿಯೇ ಇಲ್ಲಿನ ಜನರ ಜೀವಾಳ. ಮಾನವ ನಾಗರಿಕತೆಯ ಉಗಮ ಮತ್ತು ವಿಕಾಸಕ್ಕೆ ಕೃಷಿಯೇ ಕಾರಣ. ಭಾರತ ಕೃಷಿ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಎರಡನೇ ಸ್ಥಾನದಲ್ಲಿದೆ. ಆಹಾರ ಮತ್ತು ಸರಕುಗಳನ್ನು ಉತ್ಪಾದಿಸುವ ಪ್ರಮುಖ ಕ್ಷೇತ್ರವಾಗಿರುವ ಕೃಷಿ ಜನಭರಿತವಾದ ಮತ್ತು ಶ್ರೇಣಿಕೃತವಾದ ಸಮಾಜಗಳ ಬೆಳವಣಿಗೆಗೆ ಪ್ರಾಚೀನದಿಂದಲೂ ಕಾರಣವಾಗಿದೆ. ಕೃಷಿಯ ಆದಿಯನ್ನು ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. ಅದು ನಾಗರಿಕತೆಯಷ್ಟೇ ಪ್ರಾಚೀನವಾದದ್ದು, ಆದರೆ ಇದರ ವಿಕಾಸ ಹೇಗೆ ಆಗಿರಬಹುದೆಂದು ಊಹಿಸಬಹುದು. ಮೊದಲಲ್ಲಿ ಮನುಷ್ಯ ತನ್ನ ಆಹಾರ ಸಂಪಾದನೆ ಹಾಗೂ ರಕ್ಷಣೆಗೋಸ್ಕರ ಕೈಕಾಲುಗಳ ಬಲ ಮತ್ತು ಚಟುವಟಿಕೆಗಳ ಮೇಲೆ ಅವಲಂಬಿಸಿಕೊಂಡಿದ್ದ. ನಿಸರ್ಗದಲ್ಲಿ ಸ್ವೇಚ್ಛವಾಗಿ ಸಮೃದ್ಧವಾಗಿ ಬೆಳೆದ ಸಸ್ಯ ಮತ್ತು ಪ್ರಾಣಿ ಉತ್ಪನ್ನಗಳೇ ಈತನ ಆಹಾರ. ಮಾನವನ ಬುದ್ದಿ ಬೆಳೆದಂತೆ ಸ್ವಪ್ರಯತ್ನದಿಂದ ತನಗೆ ಬೇಕಾದ ಸಸ್ಯ ಮತ್ತು ಪ್ರಾಣಿಗಳ ಉತ್ಪನ್ನಗಳನ್ನು ಬಳಸಿಕೊಳ್ಳುತ್ತಾ, ಅವುಗಳನ್ನು ರಕ್ಷಿಸಿಕೊಂಡು ಅವುಗಳನ್ನು ಹೆಚ್ಚು ಹೆಚ್ಚು ಅಭಿವೃದ್ದಿ ಮಾಡುತ್ತಾ ಹೊಸ ಹೊಸ ಪ್ರಯೋಗ ಮಾಡುತ್ತಾ ಬಂದಿದ್ದಾನೆ. ಹೀಗೆ ಆರಂಭಗೊಂಡ ಕೃಷಿ ಪದ್ಧತಿ ಸಂಪೂರ್ಣ ಸಾವಯವ ಪ್ರಾಣಿ ಮತ್ತು ಸಸ್ಯ ಸಂಗೋಪಣೆಯಿಂದ ಕೂಡಿತ್ತು. ಆದರೆ ಆಧುನಿಕ ಕಾಲದಲ್ಲಿ ರಾಸಾಯನಿಕ ಮತ್ತು ಯಾಂತ್ರಿಕ ಹಾಗೂ ತಾಂತ್ರಿಕವಾಗಿ ಬೆಳವಣಿಗೆಯಿಂದ ಕೂಡಿದೆ.

ಪ್ರಾಚೀನದಿಂದಲೂ ರೈತರು ಕೃಷಿಯ ಜೊತೆಜೊತೆಗೆ ಪಶುಪಾಲನೆಯನ್ನು ಮಾಡುತ್ತಾ ಬಂದಿದ್ದಾರೆ. ಕೃಷಿಗೆ ಪ್ರಾಣಿಗಳನ್ನು ಪಳಗಿಸಿ ಉಪಯೋಗಿಸಿಕೊಂಡು ಅವುಗಳಿಂದ ಸಿಗುವ ಉತ್ಪನ್ನಗಳನ್ನು ಕೃಷಿಗೆ ಬಳಕೆ ಮಾಡಿಕೊಳ್ಳುತ್ತಿದ್ದರು. ಇದರಿಂದ ದೇಸಿಯವಾಗಿ ಸ್ವಾವಲಂಬಿ ಪರಿಸರ ಸ್ನೇಹಿ ಜೈವಿಕ ಕೃಷಿ ಪದ್ಧತಿಯನ್ನು ಸುಸ್ಥಿರಗೊಳಿಸಿದ್ದರು. ಸಸ್ಯಗಳ ಸಮೃದ್ಧ ಬೆಳವಣಿಗೆಗೆ ಎಮ್ಮೆ ಮತ್ತು ದನಗಳ ಗೊಬ್ಬರವನ್ನು ಬಳಸಿಕೊಂಡು ಬೆಳೆಗಳನ್ನು ಬೆಳೆಯುತ್ತಿದ್ದರು. ಗೊಬ್ಬರವನ್ನು ರೈತರೇ ತಮ್ಮ ಪಾರಂಪರಿಕ ಜ್ಞಾನದಿಂದ ತಯಾರಿಸಿಕೊಂಡು ಬಳಸುತ್ತಿದ್ದರು.

---

[1] *ಸಂಶೋಧಕರು, ಜಾನಪದ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.*

ಎಲ್ಲಿಯವರೆಗೆ ರೈತರಿಗೆ ದೇಶಿ ಹಸುಗಳ ಮೇಲೆ ಪ್ರೀತಿ ಇತ್ತೊ ಅಲ್ಲಿಯವರೆಗೆ ಆತನ ಭೂಮಿ ಫಲವತ್ತತೆಯಿಂದ ಕೂಡಿತ್ತು. ಯಾವಾಗ ಹಸುವಿನ ಹಾಲಿನಿಂದ ಬರುವ ದುಡ್ಡಿನ ರುಚಿ ಹಚ್ಚಲಾಯಿತೊ ಆಗ ಆತ ವಿದೇಶಿ ಹಸುಗಳ ಹಿಂದೆ ಹೋದ. ದಿನಕ್ಕೆ ಇಪತ್ತಕ್ಕೂ ಹೆಚ್ಚು ಲೀಟರ್ ಹಾಲನ್ನು ಡೈರಿಗೆ ಹಾಕಿ ಕೈ ತುಂಬಾ ದುಡ್ಡು ತೆಗೆದುಕೊಂಡು ಬಂದು, ಅಷ್ಟರಲ್ಲಾಗಲೇ ಭೂಮಿ ಫಲವತ್ತತೆ ಕಳೆದುಕೊಂಡಿತ್ತು. ಅಮೃತದ ಬಟ್ಟಲಾಗಿದ್ದ ಭೂಮಿ ವಿಷದ ಬಟ್ಟಲಾಯಿತು. ಸದಾ ಹಸಿರಿನಿಂದ ಕಂಗೊಳಿಸುತ್ತಿದ್ದ ಭೂಮಿ ಇಂದು ಬರಡಾಗಿವೆ. ರಾಸಾಯನಿಕ ಇಲ್ಲದೆ ಬೆಳೆ ಬೆಳೆಯಲಾರದು ಅನ್ನೋ ಮನಸ್ಥಿತಿಗೆ ಆತ ಬಂದು ತಲುಪಿದ್ದಾನೆ. ಸುಲಭವಾಗಿ ಹಣ ಮಾಡಲು ಹಣದ ಹಿಂದೆ ಹೋದ ರೈತ ಇಂದು ಸಾಲದ ಸುಳಿಗೆ ಸಿಲುಕಿ ಬಿಟ್ಟಿದ್ದಾನೆ. ಕೆಮಿಕಲ್ ಫ್ಯಾಕ್ಟ್ರಿಗಳು ಮಾತ್ರ ತಾವು ಅಂದುಕೊಂಡದ್ದನ್ನು ಸಾಧಿಸಿ ಇಂದು ಅಗಾದವಾಗಿ ಬೆಳೆದು ನಿಂತಿವೆ. ರಾಸಾಯನಿಕ ಗೊಬ್ಬರಗಳ ಬೆಲೆ ಗಗನಕ್ಕೇರಿದೆ, ಬಿತ್ತನೆ ಬೀಜ ಕಳಪೆಯಿಂದ ಕೂಡಿದೆ ಇದರಿಂದ ಬೆಳೆಯುವ ಭೂಮಿ ಬಂಜರಾಗಿದೆ. ಬೆಳೆ ಇದ್ದಕಡೆ ಕಳೆ ಆವರಿಸಿ ರೈತ ಸಂಕಷ್ಟಕ್ಕೆ ಒಳಗಾಗಿದ್ದಾನೆ. ಯಂತ್ರೋಪಕರಣಗಳು ಪಾರಂಪರಿಕ ಬೇಸಾಯ ಪದ್ಧತಿಯನ್ನು ವಿನಾಶದತ್ತ ಕೊಂಡೋಯ್ಯುತ್ತಿವೆ. ರೈತರು ಈ ಎಲ್ಲಾ ಸಮಸ್ಯಗಳನ್ನು ಅರಿತು ತಮ್ಮ ಮೂಲ ಪಾರಂಪರಿಕ ಸಾವಯವ ಬೇಸಾಯದ ಕಡೆಗೆ ಮುಖಮಾಡಬೇಕಿದೆ.

ಪ್ರಾಚೀನ ಭಾರತೀಯರು ಕೃಷಿಗೆ ತಮ್ಮ ಜೀವನೋಪಾಯಕ್ಕೆ ಪರಂಪರೆಯಿಂದ ದನಗಳನ್ನು ಅವಲಂಬಿಸಿದ್ದರು. ಕೃಷಿಗೆ ಸಹಾಯವಾಗಲು, ದನಕರುಗಳನ್ನು ಸಾಕುವುದರ ಮೂಲಕ ಹೈನುಗಾರಿಕೆಯನ್ನು ಹಾಗೂ ಕೃಷಿಯ ಅಭಿವೃದ್ಧಿಯನ್ನು ಮಾಡುತ್ತಾ ಆಹಾರ ಕ್ರಾಂತಿಗೆ ನೆರವಾಗಿದ್ದರು. ದನಗಳ ಉತ್ಪನ್ನವನ್ನು ಕೃಷಿ ಭೂಮಿಗೆ ಬಳಸುತ್ತಿದ್ದರು. ಆದರೆ ಇಂದು ಎಲ್ಲೆಡೆ ಆಹಾರ ಸಮಸ್ಯೆಯಿಂದ ಹಸಿವಿನ ಕೂಗು ಮುಗಿಲು ಮುಟ್ಟಿದೆ. ಇದರಿಂದ ಮುಂದೆ ಇನ್ನಷ್ಟು ಆಹಾರದ ಸಮಸ್ಯೆಯನ್ನು ಅನುಭವಿಸಬೇಕಾಗುತ್ತದೆ. ಆದ್ದರಿಂದ ಎಚ್ಚೆತ್ತುಗೊಂಡು ಪಾರಂಪರಿಕ ಸಾವಯವ ಕೃಷಿಯ ಕಡೆಗೆ ಹಿಂದುರಗಬೇಕಿದೆ. ನಮ್ಮ ಕೃಷಿ ಪರಂಪರೆಯನ್ನು ಮುಂದುವರಿಸಿಕೊಂಡು ವಿಷಮುಕ್ತ ಆಹಾರ, ಸ್ವಚ್ಚಂದ ಪರಿಸರವನ್ನು ಕಾಪಾಡಿಕೊಳ್ಳುವುದು ನಮ್ಮೆಲ್ಲರ ಹೊಣೆಯಾಗಿರುತ್ತದೆ.

ಭಾರತೀಯ ಔಷಧ ತಯಾರಿಕೆ ಪರಂಪರೆಯ ಪ್ರಕಾರ ಸಸ್ಯ ಮತ್ತು ಪ್ರಾಣಿ ಜನ್ಯಗಳಿಂದ ಔಷಧಗಳನ್ನು ತಯಾರಿಸಲಾಗುತ್ತದೆ. ಅದರಂತೆ ದನಗಳ ಉತ್ಪನ್ನದಿಂದ ಹಲವಾರು ಔಷಧಗಳನ್ನು ತಯಾರಿಸಲಾಗುತ್ತದೆ. ಅದರಂತೆ ದನಗಳು ಮಾನವನಿಗೆ ಹಾಲಿನಿಂದ ಗಂಜಲದವರೆಗೆ ಹಲವು ಉಪಯೋಗವನ್ನು ನೀಡುತ್ತದೆ. ದನ ಕಾಮಧೇನು ಕಲ್ಪವೃಕ್ಷವಾಗಿ ಸರ್ವೇಜನ ಸುಖಿನೋಭವಂತೋ ಎಂದು, ಅದು ಇದ್ದಾಗ ಹರಸುತ್ತಾ, ಸತ್ತಾಗಲೂ ಮನುಕುಲಕ್ಕೆ ತಿನ್ನುವ ಸಕ್ಕರೆಯಿಂದ ಹಿಡಿದು

ನುಂಗುವ ಮಾತ್ರೆಯವರೆಗೆ ವಿಜ್ಞಾನದೊಡನೆ ಬಗೆ ಬಗೆಯ ದೇಹ ಉತ್ಪನ್ನ ನೀಡಿ ಪೊರೆಯುತ್ತಿದೆ. ಮೆಟ್ಟುವ ಮಣ್ಣಿನಿಂದ ಹಿಡಿದು ಕೂರುವ ವಾಹನದ ಸೀಟಿನವರೆಗೆ ಆಧುನಿಕಥೆಗೆ ಹರಿದು ಹಂಚಿ ತಾನು ತ್ಯಾಗಮಯಿಯಾಗಿದೆ. ಇದನ್ನೇ ನಾಗೇಶ ಹೆಗಡೆಯವರುವ ಗೋಮಯ ಎಂದು ಕರೆದಿದ್ದಾರೆ.

**ಸಾವಯವ ಜೈವಿಕ ಗೊಬ್ಬರ ತಯಾರಿಕೆ**

ಹಸುವಿನ ಸಗಣಿ ಮತ್ತು ಗಂಜಲ ಸಸ್ಯಗಳಿಗೆ ಉತ್ತಮವಾದ ಔಷದ. ಇದನ್ನು ತೊಟ್ಟಿಯಲ್ಲಿ ತುಂಬಿಟ್ಟು ಚೆನ್ನಾಗಿ ಕೊಳೆಯಿಸಿದಾಗ ಹಲವಾರು ಜೈವಿಕ ಕ್ರಿಯೆಗಳು ನಡೆಯುತ್ತವೆ. ನಂತರ ಇದನ್ನು ಕೃಷಿ ಭೂಮಿಗೆ ಹಾಕಿದರೆ ಬೆಳೆ ಹುಲುಸಾಗಿ ಬೆಳೆಯುತ್ತದೆ. ಗೋಮಯ ಅಥವಾ ಸಗಣಿಯಲ್ಲಿ ಪ್ರಮುಖವಾಗಿ 18 ರೀತಿಯ ಖನಿಜಗಳಿವೆ. ನೈಟ್ರೋಜನ್, ಫಾಸ್ಪರಸ್, ಪೊಟಾಶಿಯಂ ಹೇರಳವಾಗಿರುತ್ತದೆ. ಸಗಣಿಯಲ್ಲಿ ಪರಿಸರವನ್ನು ಪ್ರದೂಷಣದಿಂದ ರಕ್ಷಿಸುವ ಅಂಶಗಳಿವೆ. ವಿಕಿರಣದ ದುಷ್ಪರಿಣಾಮವನ್ನು ತಡೆಯುವ ಶಕ್ತಿಯಿದೆ. ಸಗಣಿ ಅತ್ಯುತ್ತಮ ಆ್ಯಂಟಿ ಸೆಪ್ಟಿಕ್ ಮತ್ತು ಆ್ಯಂಟಿಬಯಾಟಿಕ್ ಹಾಗೂ ಅತ್ಯುತ್ತಮ ಕೀಟನಾಶಕ ಕೂಡ. ಸಗಣಿಯಲ್ಲಿ ಬೆಳೆದ ಬೆಳೆಯಲ್ಲಿ ದೇಹಕ್ಕೆ ಅಗತ್ಯವಾದ ವಿಟಮಿನ್ ಬಿ–12 ಹೇರಳವಾಗಿ ಸಿಗುತ್ತದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಹಿಂದೆ ನಮ್ಮ ಪೂರ್ವಿಕರು ಈ ಮೂಲಕವೇ ವಿಟಮಿನ್ ಬಿ–12 ಪೋಷಕಾಂಶವನ್ನು ಪಡೆದು ದೀರ್ಘಾಯುಷ್ಯ ಹೊಂದುತ್ತಿದ್ದರು ಎಂಬುದಕ್ಕೆ ಹಲವು ಆಧಾರಗಳಿವೆ.

ಹಸುವಿನ ಗೊಬ್ಬರವನ್ನು ರೈತರು ಎಲ್ಲಾ ಬೆಳೆಗಳಿಗೂ ವರ್ಷಕ್ಕೆ ಎರಡು ಬಾರಿ ಬೆಳೆಗಳಿಗೆ ಹಾಕಬಹುದಾಗಿದೆ. ಇಂದು ಪಶುಪಾಲನೆ ಒಂದು ಉದ್ಯಮವಾಗಿರುವುದರಿಂದ ಕೃಷಿ ಭೂಮಿ ಇಲ್ಲದ ರೈತರು ಗೊಬ್ಬರವನ್ನು ಹಣದ ಉದ್ದೇಶದಿಂದ ಬೇರೆಯವರಿಗೆ ಮಾರಾಟ ಮಾಡಿ ಹಣಗಳಿಸುತ್ತಾರೆ.

ಮನೆಯ ಅಂಗಳಕ್ಕೆ ಸಗಣಿ ಅಥವಾ ತೊಪ್ಪೆಯನ್ನು ನೀರಲ್ಲಿ ಮಿಶ್ರಣ ಮಾಡಿ ಹಾಕುವುದರಿಂದ ಮನೆಯಂಗಳ ಸುಂದರ ಹಾಗೂ ಶುದ್ಧವಾಗಿ ಕಾಣುತ್ತದೆ. ತೊಪ್ಪೆ ನೀರಿಟ್ಟು ರಂಗೋಲಿ ಇಟ್ಟರೆ ಆ ಅಂಗಳದ ಅಂದವೆ ಚೆಂದ. ಮನೆಯ ಒಳಾಂಗಣ ಮತ್ತು ಹೊರಾಂಗಣವನ್ನು, ಗೋಡೆಯನ್ನು ಸಗಣಿಯಿಂದ ಸಾರಿಸುತ್ತಾರೆ. ಇದರಿಂದ ಮನೆಯ ಒಳಗೆ ಯಾವುದೇ ಕ್ರಿಮಿ ಕೀಟಗಳು ನುಸುಳುವುದಿಲ್ಲ ಎಂಬ ವೈಜ್ಞಾನಿಕ ಕಾರಣವೂ ಇದೆ. ಪ್ರಾಚೀನ ಪಶು ಸಂಸ್ಕೃತಿಯಲ್ಲಿ ಸಗಣಿಯ ರಾಶಿಮಾಡಿ ಅದನ್ನು ತಿಪ್ಪೆಸ್ವಾಮಿ ಎಂದು ಕರೆದು ದೀಪ ಹಚ್ಚಿ ಪೂಜಿಸುತ್ತಿದ್ದರು. ಅದು ಇಂದಿಗೂ ಕೆಲವು ಕಡೆ ತಿಪ್ಪೆ ರಾಶಿಯನ್ನು ಪೂಜಿಸುವ ಆಚರಣೆ ಜಾರಿಯಲ್ಲಿದೆ.

ಇತ್ತೀಚೆಗೆ ಯುವ ಪ್ರತಿಭೆಯೊಬ್ಬರು ಸಗಣಿಯಿಂದ ಸಣ್ಣ ಸಣ್ಣ ದೀಪಗಳನ್ನು, ಅಲಂಕಾರಿಕೆಗಳು, ಗಡಿಯಾರ, ಗೊಂಬೆಗಳು ಮತ್ತು ಗಣೇಶನ ಪ್ರತಿಮೆಗಳನ್ನು ಮಾಡಿ ಮಾರಾಟ ಮಾಡವುದನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು.

ಸೆಗಣಿಯನ್ನು ತಟ್ಟಿ ಬಿಸಿಲಲ್ಲಿ ಒಣಗಿಸಿ ಬೆರಣಿ ಮಾಡಿ ಒಲೆ ಉರಿಸಲು ಬಳಸುತ್ತಾರೆ, ಗೋಬರ್‌ಗ್ಯಾಸ್ ಅನಿಲದಿಂದ ಅಡಿಗೆ ತಯಾರಿಸಲು ಬಳಸುತ್ತಾರೆ. ಇದರಿಂದ ಬಂದ ತ್ಯಾಜ್ಯ ಕಸ ಕಡ್ಡಿಗಳನ್ನು ತಿಪ್ಪೆ ಗುಂಡಿಗೆ ಹಾಕಿ ಕೃಷಿ ಭೂಮಿಗೆ ಗೊಬ್ಬರ ತಯಾರಿಸಲು ಬಳಸುತ್ತಾರೆ ಸೆಗಣಿಯಿಂದ ಕೃಷಿ ಭೂಮಿಗೆ ಪೋಷಕಾಂಶವಾಗಿ, ಜೀವಾಮೃತವಾಗಿ ಬಳಸುತ್ತಾರೆ.

**ಸಗಣಿಯ ವಿವಿಧ ಉಪಯೋಗಗಳು :**

- ಮನೆಯನ್ನು ಮತ್ತು ಮನೆಯ ಅಂಗಳವನ್ನು ಸಾರಿಸಲು ಸಗಣಿಯನ್ನುನ ಬಳಸುತ್ತಾರೆ.
- ಬಿದಿರಿನ ಬುಟ್ಟಿ, ಮೊರ, ಮಕ್ರಿ, ತಡಿಕೆ, ಚಂದ್ರಿಕೆ, ಇತರ ಬಿದಿರಿನಿಂದ ನೇಯ್ದ ವಸ್ತುಗಳನ್ನು ಸಾರಿಸುತ್ತಾರೆ.
- ಕೃಷಿಕರು ಧಾನ್ಯಗಳನ್ನು ಬಿತ್ತನೆ ಮಾಡುವ ಮೊದಲು ಗಂಜಲ, ಸೆಗಣಿಯಲ್ಲಿ ಒಂದು ದಿನದವರೆಗೆ ನೆನೆಸಿಟ್ಟು ಮೊಳಕೆ ಬರಿಸಿ ನಂತರ ಬಿತ್ತನೆ ಮಾಡುತ್ತಾರೆ.
- ದೇವರ ಕಾರ್ಯಗಳಿಗೆ ಸಗಣಿಯನ್ನು ಬಳಸುತ್ತಾರೆ.

**ಬೆರಣಿ ತಯಾರಿಕೆ**

ಸಗಣಿಯಿಂದ ಬೆರಣಿಯನ್ನು ಮಾಡಿ ಉರುವಲಾಗಿ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಬಳಸುತ್ತಾರೆ. ಹೇಗೆಂದರೆ ಸಗಣಿಯನ್ನು ಉಂಡೆಕಟ್ಟಿ ಅದನ್ನು ತಟ್ಟಿ ಬಿಸಿಲಿನಲ್ಲಿ ಒಣಗಿಸಿ ಬೆರಣಿಯನ್ನಾಗಿ ಮಾಡಿಕೊಂಡು ಅದನ್ನು ಇಂಧನವಾಗಿ ಬಳಕೆ ಮಾಡುತ್ತಾರೆ. ಬೆರಣಿಯಿಂದ ಕಾಯಿಸಿದ ಬಿಸಿ ನೀರಿನಿಂದ ಸ್ನಾನ ಮಾಡುವುದರಿಂದ ದೇಹ ತಂಪಾಗುತ್ತದೆ. ಇದರಿಂದ ಯಾವುದೇ ಅಡ್ಡಪರಿಣಾಮ ಇರುವುದಿಲ್ಲ. ಜೊತೆಗೆ ಬೆರಣಿಯನ್ನು ಉರಿಸಿದ ನಂತರ ಸಿಗುವ ಬೂದಿಯನ್ನು ಹೊಲಕ್ಕೆ ಹಾಕಿದರೆ ಒಳ್ಳೆಯ ಗೊಬ್ಬರ ಆಗುತ್ತದೆ ಗೋ ಸಂತತಿಯನ್ನೇ ಕೃಷಿ ಮತ್ತು ಸಾಗಾಟಕ್ಕೆ ಬಳಕೆ ಮಾಡುವುದರಿಂದ ಅಪಾರ ಪ್ರಮಾಣದ ಇಂಧನವನ್ನು ಉಳಿಸಬಹುದು ಎಂಬುದು ಒಂದು ಅಭಿಪ್ರಾಯವಾದರೆ, ದನದ ಸಗಣಿ ಬಳಸಿ ತಯಾರಿಸುವ ಗೋಬರ್ ಗ್ಯಾಸನ್ನು ಜನಪ್ರಿಯಗೊಳಿಸಿದರೆ ಶೇ.40 ರಷ್ಟು ಡಿಸೇಲ್ ಬಳಕೆಯನ್ನು ಕಡಿಮೆ ಮಾಡಬಹುದು ಎಂಬ ಅಭಿಪ್ರಾಯವಿದೆ. ಒಂದು ಹಸು ವರ್ಷಕ್ಕೆ ಸುಮಾರು 4,500 ಲೀಟರ್ ಬಯೋಗ್ಯಾಸ್ ಉತ್ಪಾದಿಸುವ ಸಾಮರ್ಥ್ಯ ಹೊಂದಿರುತ್ತದೆ. ಅದರಿಂದ ಅಂದಾಜು 6.80 ಕೋಟಿ ಟನ್ ಕಟ್ಟಿಗೆ

ಉಳಿಸಬಹುದಾಗಿದೆ ಈ ನಿಟ್ಟಿನಲ್ಲಿ ಗುಜರಾತ್‌ನಲ್ಲಿ ಒಂದು ಸಕಾರಾತ್ಮಕ ಹೆಜ್ಜೆ ಇಡಲಾಗಿದ್ದು, ಅಲ್ಲಿನ ಈಡರ್ ಎಂಬಲ್ಲಿ ಸಗಣಿಯಿಂದ ಅನಿಲ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲಾಗಿದೆ.

**ಗಂಜಲ**

ದನದಲ್ಲಿ ಮೂವತ್ತಮೂರು ಕೋಟಿ ದೇವಾನುದೇವತೆಗಳು ನೆಲೆಸಿದ್ದಾರೆ ಎಂಬುದು ಜನಪದರ ನಂಬಿಕೆ. ಆದ್ದರಿಂದ ಗಂಜಲ ಆ ಎಲ್ಲಾ ದೇವತೆಗಳ ಪವಿತ್ರ ತೀರ್ಥ ಎಂಬ ನಂಬಿಕೆಯಿಂದ ಔಷಧವಾಗಿ ಬಳಸುತ್ತಾರೆ. ಸಸ್ಯಗಳ ಬೆಳವಣಿಗೆಗೆ ಮತ್ತು ಕ್ರಿಮಿಕೀಟಗಳ ರಕ್ಷಣೆಗೆ ಗಂಜಲವನ್ನು ಸಿಂಪಡಣೆ ಮಾಡಲಾಗುತ್ತದೆ. ಗೋಮೂತ್ರಕ್ಕೆ ಭಾರತೀಯ ಚಿಕಿತ್ಸಾ ವಿಧಾನಗಳಲ್ಲಿ ವಿಶಿಷ್ಟವಾದ ಸ್ಥಾನವಿದೆ. ಜೀವ ರಸಾಯನಶಾಸ್ತ್ರದ ಪ್ರಕಾರ ಗೋಮೂತ್ರದಲ್ಲಿ 22 ಅತ್ಯುತ್ತಮವಾದ ಔಷಧೀಯ ಸತ್ವಗಳಿವೆ. ಗೋಮೂತ್ರದಲ್ಲಿರುವ ನೈಟ್ರೋಜನ್, ಯೂರಿಯಾ, ಅಮೋನಿಯಾ ಸಸ್ಯಗಳ ರೋಗ ನಿರೊಧಕ ಶಕ್ತಿಯನ್ನು ವೃದ್ಧಿಸುತ್ತದೆ.

ಒಂದು ಲೀಟರ್ ಗೋಮೂತ್ರದಲ್ಲಿ 20 ರಿಂದ 60 ಮಿಲಿ ಲೀಟರ್ ಎಲ್ಯೆಂಟ್ಯೆಮ್, 0.10 ರಿಂದ 1.40 ಮಿಲಿ ಗ್ರಾ ಕ್ಯಾಲ್ಸಿಯಂ, 0.10 ಗ್ರಾಂ ಕ್ರಿಯೆಟ್ಯೆನ್, 3.7 ಗ್ರಾಂ ಮೆಗ್ನಿಷಿಯಂ 20 ರಿಂದ 28 ಮಿಲಿ ಗ್ರಾಂ ಅಮೋನಿಯಾ, 0.8 ರಿಂದ 1.5 ಮಿಲಿ ಇ.ಕ್ಯೂ ಸೋಡಿಯಂ, 3ರಿಂದ 5 ಮಿಲಿಗ್ರಾಂ ಅಮೋನಿಯಾ, 0.80 ರೊಂದ 1.5 ಮಿಲಿ ಗ್ರಾಂ ಸಲ್ಫೇಟ್, 1 ರಿಂದ 4 ಮಿಲಿ ಗ್ರಾಂ ಯೂರಿಕ್ ಆ್ಯಸಿಡ್ ಇದೆ. ಹಾಗಾಗಿ ಇದು ಖನಿಜಗಳ ಆಗರ ಎಂಬುದು ವಿಜ್ಞಾನಿಗಳು ಹೇಳುವ ಮಾತು. ಗಂಜಲ ದಿಂದ ಗೋರೋಜನ, ಜೀವಾಮೃತ ತಯಾರಿಸಿ ಸಸ್ಯಗಳಿಗೆ ಸಿಂಪಡಿಸುತ್ತಾರೆ ಇದು ಸಸ್ಯಗಳ ಶಕ್ತಿವರ್ಧನೆಗೆ ಮತ್ತು ಕ್ರಿಮಿನಾಶಕಕ್ಕೆ ಸಹಕಾರಿಯಾಗಿದೆ.

**ಪಂಚಗವ್ಯ**

ಸಸ್ಯಗಳ ಬೆಳವಣಿಗೆ ಮತ್ತು ಮಣ್ಣಿನ ಫಲವತ್ತತೆಗೆ ಬಹುಕೋಟಿ ಜೀವಾನುಗಳ ಅವಶ್ಯಕತೆಯಿದೆ. ಅದನ್ನು ಪಂಚಗವ್ಯದ ಮೂಲಕ ಪಡೆದುಕೊಂಡು ಮಣ್ಣಿಗೆ ಸೇರಿಸಿ ಸಸ್ಯಾಭಿವೃದ್ಧಿ ಮಾಡಬಹುದು, ಫಲವತ್ತತೆ ಹೆಚ್ಚಿಸ ಬಹುದು. ಇದು ಪ್ರಾಚೀನ ಕಾಲದಿಂದಲೂ ನಮ್ಮ ಜನಪದರು ಇದನ್ನು ಬಳಸಿಕೊಂಡು ಬಂದಿದ್ದಾರೆ.

ಪಂಚಗವ್ಯ ತಯಾರಿಸಲು ಐನೂರು ಮಿ.ಲೀಟರ್ ಹಸುವಿನ ತುಪ್ಪ, ಐದು ಕೆ.ಜಿ ಹಸುವಿನ ಸಗಣಿ, ಐದು ಲೀಟರ್ ಹಸುವಿನ ಗಂಜಲ, ಎರಡು ಲೀಟರ್ ಹಸುವಿನ ಹಾಲು, ಹದಿನೈದು ದಿನಗಳಷ್ಟು ಹಳೆಯದಾದ ಎರಡು ಲೀಟರ್ ಹಸುವಿನ ಮೊಸರು ಮತ್ತು ಒಂದು ಕೆ.ಜಿ ಕರಿಬೆಲ್ಲ ಅವಶ್ಯಕವಾಗಿರುತ್ತದೆ.

ಐನೂರು ಮಿ.ಲೀ. ತುಪ್ಪವನ್ನು ಕಾಯಿಸಿ ಐದು ಕೆ.ಜಿ ಹಸುವಿನ ಸಗಣಿಯೊಂದಿಗೆ ಬೆರೆಸಿ ಇದನ್ನು ಮಣ್ಣು ಅಥವಾ ಪ್ಲಾಸ್ಟಿಕ್ ಪಾತ್ರೆಯಲ್ಲಿ ಹಾಕಿ ಬಾಯಿ ಕಟ್ಟಿ ನಾಲ್ಕು ದಿನ ಇಡಬೇಕು. ಇದನ್ನು ಪ್ರತಿದಿನ ಕರಗಿಸುತ್ತಿರಬೇಕು. ಐದನೇ ದಿನ ಐದು ಲೀಟರ್ ಹಸುವಿನ ಗಂಜಲ, ಹದಿನೈದು ದಿನಗಳಷ್ಟು ಹಳೆಯದಾದ ಎರಡು ಲೀಟರ್ ಮೊಸರು, ಎರಡು ಲೀಟರ್ ಹಾಲು, ಕರಿಬೆಲ್ಲ ಒಂದು ಕೆ.ಜಿ. ಮತ್ತು ಐದು ಲೀಟರ್ ನೀರನ್ನು ಮಿಶ್ರ ಮಾಡಿ ಹದಿನೈದು ದಿನಗಳ ಕಾಲ ಇಡಬೇಕು. ಪ್ರತಿದಿನ ಇದನ್ನು ಮೂರು ಬಾರಿ ಚೆನ್ನಾಗಿ ಕಲಕಬೇಕು. ಹೀಗೆ ಸಿದ್ಧವಾದ ದ್ರಾವಣವನ್ನು ಆರು ತಿಂಗಳುಗಳ ಕಾಲ ಬಳಸಬಹುದು. ಒಂದು ಲೀಟರ್ ದ್ರಾವಣವನ್ನು 35 ರಿಂದ 50 ಲೀಟರ್ ನೀರಿನೊಂದಿಗೆ ಮಿಶ್ರಣಮಾಡಿ ಸಿಂಪಡಿಸಬಹುದು. ಇದನ್ನು ಸಿಂಪಡಿಸುವುದರಿಂದ ಗಿಡಗಳಿಗೆ ಬೇಕಾದ ಲಘು ಪೋಷಕಾಂಶವನ್ನು, ಕೀಟ ವಿಕರ್ಷಕ ಹಾಗೂ ರೋಗ ನಿರೋಧಕ ಶಕ್ತಿಯನ್ನು ನೀಡುತ್ತದೆ. ಇದನ್ನು ಬೆಳವಣಿಗೆ ಪ್ರಚೋದಕವನ್ನಾಗಿಯೂ ಬಳಸುತ್ತಾರೆ.

**ಜೀವಾಮೃತ**

ಜೀವಾಮೃತ ತಯಾರಿಸಲು ಹತ್ತು ಕೆ.ಜಿ ಹಸುವಿನ ಸಗಣಿ, ಹತ್ತು ಹಸುವಿನ ಗಂಜಲ, ಎರಡು ಕೆ.ಜಿ ಯಾವುದೇ ದ್ವಿದಳ ಧಾನ್ಯದ ಹಿಟ್ಟು, ಎರಡು ಕೆ.ಜಿ ಕರಿಬೆಲ್ಲ ಹಾಗೂ ಒಂದು ಬೊಗಸೆ ಸ್ಥಳೀಯ ತೋಟದ ಮಣ್ಣು. ಹತ್ತು ಕೆ.ಜಿ ದೇಸಿ ಹಸುವಿನ ಸಗಣಿ, ಹತ್ತು ಲೀಟರ್ ಗೋಮೂತ್ರ, ಎರಡು ಕೆ.ಜಿ ಬೆಲ್ಲ, ಎರಡು ಕೆ.ಜಿ ಯಾವುದೇ ದ್ವಿದಳ ಧಾನ್ಯದ ಹಿಟ್ಟು, ಒಂದು ಬೊಗಸೆ ಜಮೀನಿನ ಮಣ್ಣು ಇವುಗಳನ್ನು 200 ಲೀಟರ್ ನೀರಿನಲ್ಲಿ ಸೇರಿಸಿ 7 ದಿನ ನೆರಳಿನಲ್ಲಿಟ್ಟು ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ದ್ರಾವಣವನ್ನು ಚೆನ್ನಾಗಿ ಕಲಕಬೇಕು. ಇದರಲ್ಲಿ ಬೆಳೆಗಳಿಗೆ ಪೋಷಕಾಂಶ ಸರಬರಾಜು ಮಾಡಲು ನೆರವಾಗುವ ಪಿ.ಎಸ್.ಬಿ, ಬ್ಯಾಸಿಲಸ್, ಸಿಲಿಕಸ್, ಮೈಕೋರೈಜಾ ಸೇರಿದಂತೆ ಅಸಂಖ್ಯಾತ ಸೂಕ್ಷ್ಮ ಜೀವಾಣುಗಳು ವೃದ್ಧಿಯಾಗುತ್ತವೆ. ಈ ದ್ರಾವಣವನ್ನು ಬೆಳೆಗಳಿಗೆ ನೀರಾವರಿ ಮೂಲಕ ಅಥವಾ ಬೆಳೆ ಹೊದಿಕೆ ಮೇಲೆ ಸಿಂಪಡಣೆ ಮಾಡುವ ಮೂಲಕ ನೀಡಬಹುದಾಗಿರುತ್ತದೆ. ಇದರಿಂದ ಭೂಮಿಯಲ್ಲಿ ಸೂಕ್ಷ್ಮ ಜೀವಿಗಳ ಕ್ರಿಯೆ ವೃದ್ಧಿಯಾಗಿ ಮಣ್ಣು ಫಲವತ್ತಾಗುತ್ತದೆ. ಸಗಣಿಯಿಂದ ಗೊಬ್ಬರ ಮಾತ್ರವಲ್ಲದೆ ಅದನ್ನು ಜೈವಿಕ ಅನಿಲ ತಯಾರಿಕೆಯಲ್ಲೂ ಬಳಸಿಕೊಳ್ಳುತ್ತಾರೆ.

**ಗೋಬರ್ ಗ್ಯಾಸ್**

ದನದ ಸೆಗಣಿಯಿಂದ ಹಿಂದೆ ಗೋಬರ್ ಗ್ಯಾಸ್ ತಯಾರಿಸಲಾಗುತ್ತಿತ್ತು. ಪ್ರಸ್ತುತದಲ್ಲಿ ಎಲ್.ಪಿ.ಜಿ. ಬಂದ ಮೇಲೆ ಗೋಬರ್ ಗ್ಯಾಸ್ ಬಳಕೆ ತೀರ ಕಡಿಮೆಯಾಗಿದೆ. ಆದರೂ ಗ್ರಾಮೀಣ ಪ್ರದೇಶದ ಕೆಲವು ಕುಟುಂಬಗಳಲ್ಲಿ ಇಂದಿಗೂ ಬಳಕೆಯಲ್ಲಿದೆ. ಅಗಲವಾದ ಗುಂಡಿಗೆ ಸಗಣಿಯನ್ನು ನೀರಿನಲ್ಲಿ ಕಲೆಸಿದ ಸಗಣಿಯನ್ನು ಹಾಕಿ, ಅದನ್ನು ಕೊಳೆಸುವುದರ ಮೂಲಕ ಗ್ಯಾಸನ್ನು

ಪಡೆದುಕೊಂಡು ಅಡಿಗೆ ತಯಾರಿಸುತ್ತಿದ್ದರು. ಈ ಅಡಿಗೆ ಸ್ವಾದಿಷ್ಟವಾಗಿ ಆರೋಗ್ಯವನ್ನು ವೃದ್ಧಿಸುತ್ತಿತ್ತೆಂದು ಜನಪದರ ಅನುಭವವಾಗಿದೆ. ಇದರಿಂದ ಜನರಿಗೆ ಲಾಭದಾಯಕವಾಗಿತ್ತು. ಇದರ ತ್ಯಾಜ್ಯ ಕೃಷಿ ಬಳಕೆಗೆ ಯೋಗ್ಯವಾದ ಗೊಬ್ಬರವಾಗಿ ಬಳಕೆಯಾಗುತಿತ್ತು. ಇದರಿಂದ ಸಂಪತ್ತು ಮತ್ತು ಪ್ರಾಣಕ್ಕೆ ಯಾವುದೇ ಹಾನಿ ಉಂಟಾಗುತ್ತಿರಲಿಲ್ಲ. ಆದರೆ ದನಗಳ ಕೊರತೆಯಿಂಟಾಗಿ ಇದರ ಬಳಕೆ ಗೊಬ್ಬರದ ಅಭಾವದಿಂದ ನಾಶ ಹೊಂದಿದೆ. ಇದರ ಸ್ಥಾನದಲ್ಲಿ ಎಲ್.ಪಿ.ಜಿ ಗ್ಯಾಸ್ ಬಳಕೆಯಲ್ಲಿದೆ.

**ಬೀಜಾಮೃತ**

ಬೀಜ ಬಿತ್ತುವ ಹಿಂದಿನ ದಿನ 5 ಕೆ.ಜಿ ಸೆಗಣಿಯನ್ನು ತೆಳುವಾದ ಹತ್ತಿ ಬಟ್ಟೆಯಲ್ಲಿ ಕಟ್ಟಿ 50 ಲೀ. ನೀರಿನ ತೊಟ್ಟಿಯಲ್ಲಿ ಕೆಳಗೆ ತಾಗದಂತೆ ಇಳಿ ಬಿಡಬೇಕು. ಬೀಜ ಬಿತ್ತುವ ದಿನ ಪ್ರತ್ಯೇಕವಾಗಿ ಒಂದು ಲೀಟರ್ ನೀರಿರುವ ಪಾತ್ರೆಗೆ 250 ಗ್ರಾಂ. ಸುಣ್ಣವನ್ನು ನೆನೆಹಾಕಿ ತಿಳಿಯನ್ನು ಬೇರ್ಪಡಿಸಿ ಐದು ಲೀಟರ್ ಗಂಜಲದೊಂದಿಗೆ ಮಿಶ್ರಣ ಮಾಡಬೇಕು. ಇಳಿ ಬಿಟ್ಟಿರುವ ಸಗಣಿಯನ್ನು ಚೆನ್ನಾಗಿ ಕಲಕಿಸಿ ತೊಟ್ಟಿಯಿಂದ ಹೊರತೆಗೆದು ಸುಣ್ಣ ಮತ್ತು ಗಂಜಲದ ಮಿಶ್ರಣವನ್ನು ಸಗಣಿ ನೀರಿನಲ್ಲಿ ಮಿಶ್ರಣ ಮಾಡಬೇಕು. ಈ ರೀತಿ ತಯಾರಿಸಿದ ಬೀಜಾಮೃತ ದ್ರಾವಣದಲ್ಲಿ ಯಾವುದೇ ಬೀಜ ಅಥವಾ ಗಿಡಗಳ ಬೇರನ್ನು ಒಂದು ನಿಮಿಷ ಅದ್ದಿ ಉಪಯೋಗಿಸಿದ್ದಲ್ಲಿ ಹಲವಾರು ಶಿಲೀಂದ್ರ ಹಾಗೂ ಬ್ಯಾಕ್ಟೀರಿಯಾ ನಿಯಂತ್ರಣ ಮಾಡಬಹುದು.

ಪ್ರಾಚೀನ ಕಾಲದಿಂದಲೂ ದನಕರುಗಳು ಮಾನವನ ಸಂಪತ್ತಾಗಿ ಅವನ ಜೀವನದ ಜೊತೆ ಬೆಸೆದುಕೊಂಡು ಬಂದಿದೆ. ಪಾರಂಪರಿಕವಾಗಿ ಜನರು ಕೃಷಿಯಲ್ಲಿ ಉಳುಮೆ ಮಾಡಲು, ಒಕ್ಕಣೆಮಾಡಲು, ಸಾರಿಗೆಗಾಗಿ ದನಕರುಗಳನ್ನು ಅವಲಂಬಿಸಿದ್ದರು. ಅದರ ಉಪಯೋಗ ಪಡೆಯುತ್ತಿದ್ದರು. ಇಂದಿನ ಆಧುನಿಕ ಯುಗದ ಯಾಂತ್ರಿಕ ಮತ್ತು ವೈಜ್ಞಾನಿಕ ಯುಗದ ಬದಲಾದ ಸಂದರ್ಭದಲ್ಲಿ ಅದರ ಸ್ಥಾನವನ್ನು ಟ್ರ್ಯಾಕ್ಟರ್, ಟ್ರಿಲ್ಲರ್, ಒಕ್ಕಣೆಯಂತ್ರ, ಆಟೋ ಇತರೆ ಯಂತ್ರಗಳು ಪಡೆದು ಮೂಲ ಸಾವಯವ ಬೇಸಾಯದ ಸತ್ವವನ್ನು ಕ್ಷೀಣಿಸುವಂತೆ ಮಾಡಿದೆ.

ಪರಂಪರೆಯಿಂದ ದನದ ಗೊಬ್ಬರವನ್ನು ಜೈವಿಕ ಗೊಬ್ಬರವಾಗಿ ಬೆಳೆಗಳಿಗೆ ಹಾಕುವುದರ ಮೂಲಕ ವಿಷ ರಹಿತ ಶುದ್ಧ ಬೆಳೆ ತೆಗೆಯಲಾಗುತ್ತಿತ್ತು. ಆದರೆ, ಬದಲಾದ ಕಾಲದಲ್ಲಿ ಹೆಚ್ಚಿನ ಇಳುವರಿ ತೆಗೆಯುವ ದುರಾಸೆಯಿಂದ ಇಂದಿನ ರಾಸಾಯನಿಕ ಗೊಬ್ಬರಗಳ ಹಾವಳಿಯಿಂದ ಸಾವಯವ ಗೊಬ್ಬರದ ಬಳಕೆ ಕಡಿಮೆಯಾಗಿದೆ. ಆಧುನಿಕತೆ ಎಷ್ಟೇ ಮುಂದುವರಿದರೂ, ನಾಗರಿಕತೆ ಅಭಿವೃದ್ಧಿಗೊಂಡರೂ ಜನಪದ ಸಂಪ್ರದಾಯ, ಆಚರಣೆಗಳು ದನವನ್ನು ಒಳಗೊಂಡಂತೆ ಇಂದಿಗೂ ಜನಜೀವನದ ಜೊತೆಜೊತೆಗೆ ಚಾಲನೆಯಲ್ಲಿರುವುದನ್ನು ಕಾಣಬಹುದು.

ಆಧುನಿಕತೆಯ ಪ್ರಭಾವದ ಧಾಳಿಯಿಂದ ಜಾನಪದದ ಮೂಲಧಾಟಿ, ಸತ್ವ ನಶಿಸಿ, ಹೋಗದ ಹಾಗೆ ನಮ್ಮ ಜನಪದರು ದನಗಳ ಬಗ್ಗೆ ಇರುವ ಗೌರವ ಪಾವಿತ್ರತೆಯನ್ನು ಗೋಸಂತತಿಯನ್ನು ಉಳಿಸಿಕೊಂಡು ಬೆಳೆಸುವುದರ ಮೂಲಕ ಮತ್ತು ಸಾವಯವ ಕೃಷಿಯನ್ನು ಉಳಿಸುವುದರ ಮೂಲಕ ಅದರ ಮಹತ್ವವನ್ನು ಮುಂದಿನ ತಲೆಮಾರಿಗೆ ವರ್ಗಾಯಿಸಬೇಕಾಗಿದೆ. ಕೃಷಿ ಸಂಸ್ಕೃತಿ ನಿಂತ ನೀರಲ್ಲ. ಅದು ಸದಾ ನಿರಂತರವಾಗಿ ಹರಿಯುವ ಜಲಧಾರೆ. ಕಾರಂಜಿಯಂತೆ ಚಿಮ್ಮುವ ಚಿಲುಮೆ, ಅದು ಆಧುನಿಕತೆಯ ಪ್ರಭಾವದಿಂದ ನಶಿಸಿ ಹೋಗದಂತೆ ನಮ್ಮ ಜನಪದರು ಉಳಿಸಿ, ಬೆಳಸಬೇಕಾಗಿದೆ.

**ಪರಾಮರ್ಶನ ಗ್ರಂಥಗಳು**


- ಅರವಿಂದ ಮಾಲಗತ್ತಿ (ಸಂ). (2006). ಜಾನಪದ ವಿಶ್ವಕೋಶ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಚಂದ್ರಶೇಖರ ಕುಣಜೆ. (1998). ಗೋಮಾತೆ. ಪ್ರಕೃತಿ ಪ್ರಕಾಶನ, ಸಿದ್ದಾಪುರ, ಕಾರವಾರ ಜಿಲ್ಲೆ.
- ಜವರೇಗೌಡ ದೇ. (1991). ಜಾನಪದ ಅಧ್ಯಯನ – ಚೇತನ ಬುಕ್ ಹೌಸ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು.
- ಝಾ ಡಿ.ಎನ್. (ಮೂಲ), ದಿವಾಕರ ನಾ. (ಅನು.) (2010). ಗೋವು ಪವಿತ್ರ ಎಂಬ ಮಿಥ್ಯೆ. ಲಂಕೇಶ ಪ್ರಕಾಶನ, ಬೆಂಗಳೂರು.
- ನಾಗೇಶ ಹೆಗಡೆ. (2018). ಆಧುನಿಕ ಬದುಕಿನ ಪ್ರತಿಕ್ಷಣವೂ ಗೋಮಯ, ನವಕರ್ನಾಟಕ ಪಬ್ಲಿಕೇಷನ್. ಬೆಂಗಳೂರು.